(ಇಂದು ದಿನಾಂಕಃ 14-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ ಕೆ.ಆರ ವಕೀಲರಿಂದ ಪ್ರತಿವಾದಿಯ ಪರಃ**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

2. ಕ್ರಿಮೀನಲ್ ಮಿಸಲೇನಿಯಸ ನಂಬರ 87/2003 ರಲ್ಲಿ ಸಲ್ಲಿಸಿದ ಅರ್ಜಿಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಕ್ರಿಮೀನಲ್ ಮಿಸಲೇನಿಯಸ ನಂಬರ 87/2003 ರಲ್ಲಿ ಸಲ್ಲಿಸಿದ ತಕರಾರು ಅರ್ಜಿಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಕ್ರಿಮೀನಲ್ ಮಿಸಲೇನಿಯಸ ನಂಬರ 87/2003 ರಲ್ಲಿ ಸಲ್ಲಿಸಿದ ಆದೇಶ ಪುಟದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಕ್ರಿಮೀನಲ್ ಮಿಸಲೇನಿಯಸ ನಂಬರ 87/2003 ರಲ್ಲಿ ಸಲ್ಲಿಸಿದ ಪಿ.ಡಬ್ಲ್ಯೂ 1, ಪಿ.ಡಬ್ಲ್ಯೂ-2, ಆರ ಡಬ್ಲ್ಯೂ-1,ಆರ ಡಬ್ಲ್ಯೂ-2, ಆರ ಡಬ್ಲ್ಯೂ-3 ರವರ ಸಕ್ಷದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-4 ರಿಂದ ನಿ.ಪಿ-8 ಎಂದು ಗುರುತಿಸಲಾಯಿತು. ಕ್ರಿಮೀನಲ್ ಮಿಸಲೇನಿಯಸ ನಂಬರ 87/2003 ರಲ್ಲಿ ಸಲ್ಲಿಸಿದ ತೀರ್ಪಿನ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-9 ಎಂದು, ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಎಸ್.ಜಿ.ಜೆ ವಾದಿ ಪರ ವಕೀಲರಿಂದ .ಃ**

1. ಈ ದಾವೆಯನ್ನು ನನ್ನ ವಿರುದ್ಧ ಯಾರು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಏನು ಪರಿಹಾರ ಕೇಳಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ಸಾಯಪ್ಪನ ಹೆಂಡತಿ ನರಸಮ್ಮ ಅಲ್ಲ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಬರೆದಿರುತ್ತೇನೆ. ನರಸಮ್ಮ ಯಾರ ಹೆಂಡತಿ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಬರೆದಿಲ್ಲ.ಇದಕಿಂತ ಮೊದಲು ಒಂದು ದಾವೆ ಇದ್ದು ಆ ದಾವೆಯಲ್ಲಿ ನರಸಮ್ಮ ಯಾರ ಹೆಂಡತಿ ಎಂದು ಬರೆದಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು

ಹೇಳುತ್ತಾರೆ. ನನ್ನ ತಂದೆ ತೀರಿಕೊಂಡು 14 ವರ್ಷ ಆಗಿರುತ್ತದೆ. ನರಸಮ್ಮರವರಿಗೆ ಯಾವ ಯಾವ ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಗುಲ್ಬರ್ಗಾದಲ್ಲಿ ಹಾಕಿರುವ ದಾವೆಯಲ್ಲಿ ಮತ್ತು ಈ ದಾವೆಯಲ್ಲಿ ನರಸಮ್ಮರವರಿಗೆ ಯಾವ ಯಾವ ಆಸ್ತಿಗಳು ಇದ್ದವು ಎಂದು ಬರೆದಿರುತ್ತೀರಾ ಎಂದರೆ ಸಾಕ್ಷಿ ಗುಲ್ಬರ್ಗಾದ ದಾವೆಯ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಈ ದಾವೆಯಲ್ಲಿ ಬರೆದಿಲ್ಲ ಎಂದು ಹೇಳುತ್ತಾರೆ. ನರಸಮ್ಮರವರು ಮೊದಲು ಯಾರನ್ನು ಮದುವೆ ಆಗಿದ್ದರು ಎಂದು ತೋರಿಸಲು ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ವಾದಿ ಒಂದು ಮತ್ತು ಎರಡರವರು ತಮ್ಮ ಶಾಲೆಯ ದಾಖಲೆಯಲ್ಲಿ ತಂದೆಯ ಹೆಸರು ಏನು ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನರಸಮ್ಮರವರ ಹೆಸರಿಗೆ ಇರುವ ಗಿರಣಿಯ ಲೈಸೆನ್ಸನ್ನು ಅವರ ಗಂಡನ ಹೆಸರಿಗೆ ಯಾರು ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನರಸಮ್ಮರವರು ಮೊದಲು ಯಾರನ್ನು ಮದುವೆ ಆಗಿದ್ದರು ಎಂದು ತೋರಿಸಲು ಲಗ್ನ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನ್ನ ತಂದೆ ಸಾಯಪ್ಪ ತೀರಿಕೊಳ್ಳುವಾಗ ಅವರಿಗೆ 66 ವರ್ಷ ವಯಸ್ಸಾಗಿತ್ತು. ನನ್ನ ತಂದೆಯ ಜನನ ದಿನಾಂಕ ಏನು ಎಂದು ನನಗೆ ಗೊತ್ತಿಲ್ಲ ಮತ್ತು ಅವರ ಜನನ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನ್ನ ತಂದೆ ತೀರಿಕೊಳ್ಳುವಾಗ ಅವರಿಗೆ 66 ವರ್ಷ ವಯಸ್ಸಾಗಿತ್ತು ಎಂದು ನಾನು ಅಂದಾಜಿನ ಮೇಲೆ ಹೇಳುತ್ತಿದ್ದೇನೆ ಯಾವುದೇ ನಿಖರವಾದ ದಾಖಲೆಗಳು ಇಲ್ಲ. ಸಾಯಪ್ಪನ ಹೆಂಡತಿಯ ಹೆಸರು ನಿಂಗಮ್ಮ ಇರುತ್ತದೆ. ಅವರು ನನ್ನ ತಾಯಿ ಇರುತ್ತಾರೆ. ನನ್ನ ತಂದೆ ಸಾಯಪ್ಪರವರ ಮದುವೆ ಸಮಯದಲ್ಲಿ ನನ್ನ ತಂದೆಗೆ ಮತ್ತು ನನ್ನ ತಾಯಿ ನಿಂಗಮ್ಮನಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ಗುಲ್ಬರ್ಗಾದಲ್ಲಿ ನನ್ನ ತಂದೆ ಸಾಯಪ್ಪ, ನರಸಮ್ಮ ಮತ್ತು ವಾದಿ 1 ಮತ್ತು 2 ರ ನಡುವೆ ದಾವೆ ನಡೆದಾಗ ನನ್ನ ವಯಸ್ಸು 15-16 ವರ್ಷ ಇತ್ತು. ನನ್ನ ತಂದೆಯ ಮದುವೆ ನಿಂಗಮ್ಮನ ಜೊತೆ ಯಾವ ಇಸವಿಯಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. ಅದರ ಬಗ್ಗೆ ದಾಖಲೆಗಳು ಇರುವುದಿಲ್ಲ. ಮತದಾರರ ಪಟ್ಟಿಯಲ್ಲಿ ಯಾರ ಯಾರ ಹೆಸರು ಇದೆ ಎಂದರೆ ಸಾಕ್ಷಿಯು ಶಾಮರಾವ, ಜಗನ್ನಾಥ, ಹಣಮಂತರಾಯ, ಪದ್ಮ, ನಿಂಗಮ್ಮ ಮತ್ತು ಜರಣಮ್ಮರವರ ಹೆಸರು ಇದೆ ಎಂದು ಹೇಳುತ್ತಾರೆ. ನನ್ನ ಮನೆಯ ಸಂಖ್ಯೆ 7/84 ಇರುತ್ತದೆ. ನಾನು ದ್ವಿತಿಯ ಪಿ.ಯು.ಸಿ ಮುಗಿಸಿರುತ್ತೇನೆ. ಮನೆಯ ಸಂಖ್ಯೆ 7/84 ರ ಮತದಾರರ ಪಟ್ಟಿಯಲ್ಲಿ ನಾಗಲಕ್ಷ್ಮಿ ತಂದೆ ಸಾಯಪ್ಪ ಎಂದು ಇರುತ್ತದೆ, ಸಾಕ್ಷಿದಾರರು ರಾಜ್ಯ ವಿಧಾನ ಸಭಾ ಮತದಾರರ ಪಟ್ಟಿಯನ್ನು ನೋಡಿ

ಅದರಲ್ಲಿ ನಾಗಲಕ್ಷ್ಮಿ ತಂದೆ ಸಾಯಪ್ಪ ಮನೆ ಸಂಖ್ಯೆ 7/84 ಇರುತ್ತದೆ ಎಂದು ಹೇಳುತ್ತಾರೆ. ನರಸಮ್ಮ ಗಂಡ ಸಾಯಪ್ಪ ಎಂಬುವವರು ಹಾಲಕೂಡ ಗ್ರಾಮದಲ್ಲಿ ಊರಿನಲ್ಲಿ ಎಷ್ಟು ಜನ ಇದ್ದಾರೆ ಎಂದರೆ ಸಾಕ್ಷಿ ನಾನು ಹಾಲಕೂಡ ಗ್ರಾಮದಲ್ಲಿ ಇರುವುದಿಲ್ಲ ಗೊತ್ತಿಲ್ಲ ಎಂದು ಹೇಳುತ್ತಾರೆ. ಈಗ ನಾನು ನೋಡಿದ ಮತದಾರರ ಪಟ್ಟಿ ನಿಡಗುಂದಾ ಗ್ರಾಮದ್ದು ಇರುತ್ತದೆ. ಹಾಲಕೂಡ ಗ್ರಾಮದಿಂದ ನಿಡಗುಂದಾ ಎಷ್ಟು ದೂರದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ನಿಡಗುಂದಾ ಗ್ರಾಮದಿಂದ ದಕ್ಷಿಣ ಭಾಗಕ್ಕೆ 4 ಕಿ.ಮೀಟರ ದೂರದಲ್ಲಿ ಹಾಲಕೂಡ ಗ್ರಾಮ ಇದೆ ಎಂದರೆ ಸಾಕ್ಷಿ ಇರಬಹುದು ನಾನು ನೋಡಿಲ್ಲ ಎಂದು ಹೇಳುತ್ತಾರೆ. ಮತದಾರರ ಪಟ್ಟಿಯಲ್ಲಿ ನಾಗಮ್ಮ, ಜಾನಕಿಬಾಯಿ ಮತ್ತು ನರಸಮ್ಮನ ಹೆಸರು ಬಂದಿದ್ದು ಅದನ್ನು ರದ್ದು ಮಾಡುವಂತೆ ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ. ನರಸಮ್ಮನ ಬ್ಯಾಂಕ ಪಾಸ ಬುಕ್ಕಿನಲ್ಲಿ ಸಾಯಪ್ಪ ಅಂತಾ ಗಂಡನ ಹೆಸರು ಇರುವ ಬಗ್ಗೆ ನಾನು ನೋಡಿಲ್ಲ. ನಿಂಗಮ್ಮ ಸಾಯಪ್ಪರವರನ್ನು ಮದುವೆ ಆಗಿರುತ್ತಾರೆ ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನರಸಮ್ಮ ಸಾಯಪ್ಪರವರ ಹೆಂಡತಿ ಮತ್ತು ವಾದಿಯರು ಅವರ ಮಕ್ಕಳು ಎಂದು ತೋರಿಸಲು ದಾಖಲೆಗಳನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಅದು ಸುಳ್ಳು ಇರುತ್ತವೆ ಎಂದು ಹೇಳುತ್ತಾರೆ. ನರಸಮ್ಮ ಸಾಯಪ್ಪರವರ ಹೆಂಡತಿ ಮತ್ತು ವಾದಿಯರು ಅವರ ಮಕ್ಕಳು ಎಂದು ತೋರಿಸಲು ದಾಖಲೆಗಳು ಇದ್ದು ಅವು ಸುಳ್ಳು ಎಂದು ಅವುಗಳನ್ನು ರದ್ದು ಪಡಿಸಲು ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ. ನರಸಮ್ಮನ ಹೆಸರಿನಲ್ಲಿ ಹಿಟ್ಟಿನ ಗಿರಣಿ ಇದ್ದು ಆ ಗಿರಣಿಯ ದಾಖಲೆಗಳನ್ನು ನರಸಮ್ಮನ ಗಂಡನ ಹೆಸರು ಏನು ಬರೆದಿರುತ್ತಾರೆ ಎಂದು ನಾನು ನೋಡಿಲ್ಲ. ನರಸಮ್ಮ 2017 ರವರೆಗೆ ಬದುಕಿದ್ದು ಈ ದಾವೆ ಸಲ್ಲಿಸಿದ ನಂತರ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ನರಸಮ್ಮ ಹಾಗೂ ಸಾಯಪ್ಪರವರ ವಿವಾಹ ವಿಚ್ಛೆದನೆ ಆಗಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಿಃ 24-07-2018 ರಂದು ನರಸಮ್ಮ ತೀರಿಕೊಂಡರು ಎಂದರೆ ಸರಿಯಲ್ಲ.ವಾದಿಯರು ಶಾಲೆ ಕಲಿತಿರುತ್ತಾರೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಈ ದಾವೆ ಸಲ್ಲಿಸಿದ ನಂತರ ವಾದಿಯರು ದಾವೆಯಲ್ಲಿ ಏನು ದಾಖಲೆಗಳನ್ನು ಸಲ್ಲಿಸಿರುತ್ತಾರೆ ಎಂದು ನಾನು ನೋಡಿಲ್ಲ. ದಾವಾ ಆಸ್ತಿಗೂ ಹಾಗೂ ಪ್ರತಿವಾದಿಯಲ್ಲರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ

ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.